**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**

ಕ್ರಿ. ಮಿ. ನಂ. 576/2021

ಪಿಡಬ್ಲ್ಯೂ-1

| | | |
|---|---|---|
| ಹೆಸರು | - | ಶ್ರೀಮತಿ ವಿಜಯಲಕ್ಷ್ಮೀ |
| ಗಂಡನ ಹೆಸರು | - | ಶ್ರೀಶೈಲ |
| ವಯಸ್ಸು | - | 26 ವರ್ಷ |
| ಉದ್ಯೋಗ | - | ಮನೆಗೆಲಸ |
| ವಾಸ ಸ್ಥಳ | - | ಬಸವನಗರ ಸೇಡಂ |

ದಿನಾಂಕ 23-09-2022

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಜೆ. ಎಸ್. ಬಿ. ಅರ್ಜಿದಾರ ಪರ ವಕೀಲರಿಂದ**

ಎದುರುದಾರ ನನ್ನ ಗಂಡ ಇರುತ್ತಾರೆ. 2 ನೇ ಅರ್ಜಿದಾರಳು ನನ್ನ ಮಗಳು ಇರುತ್ತಾಳೆ. ನನ್ನ ಮತ್ತು ಎದುರುದಾರರ ವಿವಾಹವವು ಗುರುಹಿರಿಯರು ನಿಶ್ಚಿಯಿಸಿದ ಪ್ರಕಾರ ದಿನಾಂಕ 19.05.2014 ರಂದು ಆಗಿರುತ್ತದೆ. ಮದುವೆಯಾದ ನಂತರ ನಾನು ಎದುರುದಾರನೊಂದಿಗೆ ಬಾಳ್ವೆ ಮಾಡಲು ಅವರ ಸ್ವಂತ ಊರಾದ ಕೊಂಕನಳ್ಳಿ ಗ್ರಾಮಕ್ಕೆ ಹೋಗಿರುತ್ತೇನೆ. ಎದುರುದಾರರು ನನ್ನನ್ನು ಎರಡು ತಿಂಗಳುಗಳವರೆಗೆ ಚೆನ್ನಾಗಿ ನೋಡಿ ಕೊಂಡಿದ್ದರು. ನಂತರ ನನ್ನ ಗಂಡ ನನ್ನನ್ನು ಹೊಡೆಯಲು ಪ್ರಾರಂಭಿಸಿದ್ದು ಅದೇ ರೀತಿ ನನಗೆ ವರದಕ್ಷಿಣೆ ತರುವಂತೆ ಕಿರುಕುಳ ನೀಡಿರುತ್ತಾನೆ. ಆದರೂ ಸಹ ನಾನು ಬಾಳ್ವೆ ಹಾಳಾಗಬಾರದೆಂದು ಅವರೊಂದಿಗೆ ಬಾಳ್ವೆ ಮಾಡಿದ್ದು ಇತ್ತು. ಎದುರುದಾರ ತನ್ನ ಮನೆಯವರೊಂದಿಗೆ ಶಾಮಿಲಾಗಿ ನನ್ನನ್ನು ಮನೆಯಿಂದ ಹೊರ ಹಾಕಿರುತ್ತಾನೆ. ಆಗ ನಾನು ಸೇಡಂ ಪೊಲೀಸ್ ಠಾಣೆಗೆ ನನ್ನ ಗಂಡ ಹಾಗೂ ಆತನ ಮನೆಯವರ ವಿರುದ್ಧ ದೂರು ಸಲ್ಲಿಸಿದ್ದೆ. ಅದು ನ್ಯಾಯಾಲಯದಲ್ಲಿ ಸಿ. ಸಿ. ನಂ. 592/2014 ರಲ್ಲಿ ವಿಚಾರಣೆಯಾಗಿದ್ದು, ರಾಜೀ ಮೂಲಕ ಇತ್ಯರ್ಥ ಆಗಿರುತ್ತದೆ. ನಂತರ ಎದುರುದಾರನೊಂದಿಗೆ ನಾನು ಬಾಳ್ವೆ ಮಾಡಿದ್ದು ಆದರೂ ಸಹ ಆತ ತನ್ನ ಹಳೆಯ ಚಾಳಿಯನ್ನೆ ಮುಂದುವರೆಸಿದ್ದು ಇರುತ್ತದೆ. ಎದುರುದಾರನೊಂದಿಗಿನ ಬಾಳ್ವೆಯಿಂದ 2 ನೇ ಅರ್ಜಿದಾರಳು ಜನಿಸಿರುತ್ತಾಳೆ.

ನಂತರದಲ್ಲಿ ನಾನು ನನ್ನ ತವರು ಮನೆಗೆ ಬಂದು ವಾಸ ಇರುತ್ತೇನೆ. ನನ್ನ ಗಂಡ ನನ್ನನ್ನು ಮತ್ತು 2 ನೇ ಅರ್ಜಿದಾರಳನ್ನು ಕರೆದುಕೊಂಡು ಹೋಗುವ ಪ್ರಯತ್ನ ಮಾಡಿಲ್ಲ. ಅದೇ ರೀತಿ ನಮ್ಮ ಹೊಟ್ಟೆ-ಬಟ್ಟೆ , ವಸತಿ. ಔಷದೋಪಚಾರ ಇದರ ವ್ಯವಸ್ಥೆ ಮಾಡಿಲ್ಲ. ನನ್ನ ಗಂಡ ಬೇರೆ ಲಗ್ನ ಮಾಡಿಕೊಂಡಿರುತ್ತಾರೆ. ನನ್ನ ಗಂಡ ಟಿ.ಎಮ್.ಸಿ. ಸೇಡಂ ಇಲ್ಲಿ ಕೆಲಸ ಮಾಡುತ್ತಿದ್ದು ತಿಂಗಳಿಗೆ 25

ಸಾವಿರ ವೇತನ ಪಡೆಯುತ್ತಾನೆ. ಆದರೂ ಸಹ ಎದುರುದಾರ ನಮ್ಮ ದೇಖರೇಕಿ ಮಾಡಲು ನಿರ್ಲಕ್ಷ ಮಾಡಿರುತ್ತಾನೆ. ನಮಗೆ ಊಟ-ವಸತಿ, ಔಷದೋಪಚಾರದ ಕುರಿತು ಹಾಗೂ ನನ್ನ ಮಗಳ ಶಿಕ್ಷಣದ ಕುರಿತು ಪ್ರತಿ ತಿಂಗಳಿಗೆ 15 ಸಾವಿರ ರೂಪಾಯಿ ಅವಶ್ಯಕತೆ ಇರುತ್ತದೆ.

ನನ್ನ ಮತ್ತು ಎದುರುದಾರರ ವಿವಾಹ ಆಮಂತ್ರಣ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-1 ಎಂದು, ಸಿಸಿ ನಂ.592/2014ರ ರೋಜನಾಮೆ ಮತ್ತು ತೀರ್ಪಿನ ದೃಢಿಕತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಕೋರಲಾದಂತೆ ಅರ್ಜಿಯನ್ನು ಮಂಜೂರು ಮಾಡಲು ಪ್ರಾರ್ಥಿಸುತ್ತೇನೆ.

(**ಎದುರುದಾರ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**)

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ ದಂ., ಸೇಡಂ.

*SYH*